ಶ್ರೀ ಜೆ. ಹೆಚ್. ಪಟೇಲ್.—ಗಾರ್ಬೇಜ್ ಮೂಲಕ ಎಲೆಕ್ಟ್ರಿಸಿಟಿ ಉತ್ಪನ್ನವನ್ನು ಮಾಡುವ ಯೋಜನೆಯನ್ನು ಸರ್ಕಾರದ ಮುಂದೆ ಇದೆ. ಆದರೆ ಇವುಗಳಿಂದ ಕೊರತೆ ನೀಗುವುದಿಲ್ಲ. ನಾನ್ ಕನ್‌ವೆನ್‌ಷನಲ್ ಸೋರ್ಸ್ ವಿಜನ್ಸಿಗಳಾದ ವಾಯುವಿನಿಂದ ಸೂರ್ಯನಿಂದ ಎಲೆಕ್ಟ್ರಿಸಿಟಿ ಉತ್ಪನ್ನ ಮಾಡುವುದರಿಂದ ಸಣ್ಣ ಪುಟ್ಟ ಕೊರತೆಗಳು ನೀಗಬೇಕೇ ಹೊರತು ಇಂಡಸ್ಟ್ರಿಯಲ್ ನೀಡ್ಸ್‌ಗೆ ಆಗುವುದಿಲ್ಲ ಕೆ.ಇ.ಬಿ.ಯವರು ಸೋಲಾರ್ ಎನರ್ಜಿ ಮುಖಾಂತರ ವಿದ್ಯುತ್ತನ್ನು ಉತ್ಪಾದಿಸುವತ್ತ ಪ್ರಯತ್ನಗಳನ್ನು ಮಾಡಿದ್ದಾರೆ, ಆದರೆ ಅಂತಿಮವಾಗಿ ನಮ್ಮ ಕೊರತೆ ನೀಗಬೇಕಾದರೆ ಎರಡು ಸಾವಿರ ಮೆಗಾವ್ಯಾಟ್ ಸೂಪರ್ ಪವರ್ ಪ್ಲಾಂಟ್ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಈಗ ಕೈಗಾ ಅಣು ಸ್ಥಾವರ ಸಕಾಲದಲ್ಲಿ ಶುರು ಆದರೆ ಎಲೆಕ್ಟ್ರಿಸಿಟಿ ಪೊಸಿಷನ್ ೮-೧೦ ವರ್ಷಗಳಲ್ಲಿ ಸುಧಾರಿಸಬಹುದು. ಇಂಥ ಒಂದು ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮತಿ ಮೇರೆಗೆ ನಾವು ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಕೆ.ಇ.ಬಿ, ಮೂಲಕ ಮಾಡುವ ಯೋಜನೆಗೆ ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಕೇಂದ್ರ ಸರ್ಕಾರದವರು ಈ ಯೋಜನೆ ಪ್ರಾರಂಭ ಮಾಡಲು ಅನುಮತಿಯನ್ನು ಕೊಟ್ಟಿದ್ದಾರೆ. ಈ ಯೋಜನೆಗಳು ಬೇರೆ ಕಡೆ ಹೋಗದಂತೆ ವಿಚಾರ ಮಾಡುತ್ತೀರಾ ? ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಬೇರೆ ಯೋಜನೆಗಳನ್ನು ಮಾಡುವ ಕಡೆ ಗಮನ ಹರಿಸುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್.—ಇದು ಸರ್ಕಾರದ ಗಮನಕ್ಕೆ ಬಂದಿದೆ. ಆ ಯೋಜನೆಗಳನ್ನು ಮಾಡಲು ಮುಂದೆ ಪರಿಶೀಲಿಸುತ್ತೇವೆ.

ಬೆಳಗಾಂವ ಜಿಲ್ಲೆಯಲ್ಲಿರುವ ಎನ್. ಆರ್. ಇ. ಪಿ. ಹಾಗೂ ಇತರ ಯೋಜನೆಗಳು

೬೨೭. ಶ್ರೀ ಚಂದ್ರಶೇಖರ ಮಾವಜಿ (ಸವದತ್ತಿ) ಮಾನ್ಯ ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆಯಲ್ಲಿ ಕಳೆದ ೧೯೮೫-೮೪, ೮೪-೮೫, ೮೫-೮೬ರಲ್ಲಿ ಅರಣ್ಯ ಇಲಾಖೆಯಿಂದ ನೆಟ್ಟ ಗಿಡಗಳ ಸಂಖ್ಯೆ ಎಷ್ಟು ?

ಆ) ಸವದತ್ತಿ ತಾಲ್ಲೂಕಿನಲ್ಲಿ ೧೯೮೫-೮೯ನೇ ಸಾಲಿನಲ್ಲಿ ನೆಟ್ಟ ಗಿಡಗಳ ಸಂಖ್ಯೆ ಎಷ್ಟು, ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಗಿಡನೆಡುವ ಯೋಜನೆ ಮಂತ್ರಿ ಹಾಗೂ ಅದರಲ್ಲಿ ಸಾಧಿಸಿದ ಪ್ರಗತಿಯೇನು?

ಇ) ೧೯೮೬-೮೭ನೇ ಸಾಲಿನಲ್ಲಿ ತಾಲ್ಲೂಕಿನಲ್ಲಿ ಎನ್‌ಆರ್‌ಇಪಿ ಮಂತ್ರಿ, ಇತರೆ ಯೋಜನೆಗೆ ಮಂಜೂರಾದ ಹಾಗೂ ಖರ್ಚಾದ ಹಣ ಎಷ್ಟು ಮಂತ್ರಿ, ಎಷ್ಟು ಎಕರೆ ಭೂಮಿಯಲ್ಲಿ ವನ ಬೆಳೆಸಲಾಗಿದೆ? ಸ್ಥಳಗಳ ವಿವರ ನೀಡುವುದು.

ಈ) ನೆಟ್ಟ ಗಿಡಗಳನ್ನು ರಕ್ಷಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಬಿ. ಜೀ ವಿಜಯ ಮಾನ್ಯ (ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ವರ್ಷ	ನೆಟ್ಟ ಗಿಡಗಳ ಸಂಖ್ಯೆ (ನೆಡುತೋಪುಗಳಲ್ಲಿ)
೧೯೮೪-೮೫	೩೦ ಲಕ್ಷ
೧೯೮೫-೮೬	೧೫೬ ಲಕ್ಷ
೧೯೮೬-೮೭	೭೦ ಲಕ್ಷ

ಆ) ೧೯೮೫-೮೬ನೇ ಸಾಲಿನಲ್ಲಿ ೭.೩೦ ಲಕ್ಷ ಗಿಡಗಳನ್ನು ನೆಡಲಾಗಿದೆ. ಮತ್ತು ೩೬೫ ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ.

೧)

ಯೋಜನೆಯ ಹೆಸರು	ಮಂಜೂರಾದ ಹಣ (ರೂ ಗಳಲ್ಲಿ)	೩೧-೧-೮೬ ರವರೆಗೆ ಖರ್ಚಾದ ಹಣ (ರೂ. ಗಳಲ್ಲಿ)	ಬೆಳೆಸಲಾದ ನೆಡತೋಪುಗಳ ವಿವರ	
೧	೨	೩	೪	
೧ ಎನ್‌ಆರ್‌ಇಪಿ	೪,೪೮,೦೦೦-೦೦	೩,೫೦,೦೮೦-೦೦	೧ ಮಲಪ್ರಭಾ	೯ ಹೆಕ್ಟೇರ್
			೨ ಸೋಗಲ	೨ ಹೆಕ್ಟೇರ್
			ಒಟ್ಟು	೧೧ ಹೆಕ್ಟೇರ್
೨ ಆರ್‌ಎಲ್‌ಇಜಿಪಿ	೩,೭೦,೭೩೨-೦೦	೨,೫೧,೮೦೦-೦೦	೧ ಮಡಮಗೇರಿ	೫ ಹೆಕ್ಟೇರ್
			೨ ರಾವಾಪುರ	೫ ಹೆಕ್ಟೇರ್
			೩ ಬೂದಕೊಪ್ಪ	೧೦ ಹೆಕ್ಟೇರ್
			ಒಟ್ಟು	೨೦ ಹೆಕ್ಟೇರ್
೩ ಡಿಪಿಎಪಿ	೨,೮೭,೮೦೦-೦೦	೧,೪೯,೦೪೦-೦೦	ಹಣವು ಪೂರ್ವ ಬಾವಿ ಕೆಲಸಗಳಿಗೆ ಕೆಲಸ ಪ್ರಗತಿಯಲ್ಲಿದೆ	
೪ ಬರಗಾಲ ಪರಿಹಾರ ಕಾಮಗಾರಿಗಳು	೧,೮೦,೩೦೦-೦೦	೧,೮೨,೩೦೦-೦೦	ಎಲ್ಲವಕ್ಕೂ ಗುಂಡ್ಡದಲ್ಲಿ ೫ಹೆಕ್ಟೇರ್ ೧೨.೨ ಹೆ. /೧೨ ಕಿ.ಮೀ ರಸ್ತೆಗುಂಟಿ ಪೂರ್ವಬಾವಿ ಕೆಲಸಗಳನ್ನು ಮಾಡಲಾಗಿದೆ	
			೧ ಮುರಗೊಂಡ	೫ ಹೆಕ್ಟೇರ್
			೨ ಅಕ್ಕಿಸಾಗರ	೨.೨ ಹೆಕ್ಟೇರ್
			೩ ಹಿರೆಕೊಪ್ಪ	೫.೦ ಹೆಕ್ಟೇರ್
			ಒಟ್ಟು	೧೨.೨ ಹೆಕ್ಟೇರ್
			೧ ಸವದತ್ತಿ ಕರಕಕಟ್ಟಿ ರಸ್ತೆ —	೭ ಕಿ.ಮೀ.
			೨ ಸವದತ್ತಿ ಹೂಲಿ ಕಟ್ಟಿ —	೫ ಕಿ.ಮೀ.
೫ ಸಾಮಾಜಿಕ ಅರಣ್ಯ	೩,೨೧,೨೬೨-೦೦	೨,೨೮,೨೫೭-೦೦	೧ ಮುಗಳಿ ಹಾಳ	೧೩ ಹೆ.
			೨ ಇಟನಾಳ	೧೨ ಹೆ.
			೩ ವಂಠರಗ ನಾವಿ	೧೫ ಹೆ.
			೪ ವಂಲಪ್ರಭಾದ ಲಾರಯಂದ ದಂಡೆ	೧೦ ಹೆ.
			ಒಟ್ಟು	೫೦ ಹೆ.
ಒಟ್ಟು	೧೬,೦೭,೨೯೪-೦೦	೧೧,೫೮,೩೭೭-೦೦		೮೬ ಹೆ.
			ಪೂರ್ವಬಾವಿ ಕೆಲಸ	೧೨.೨ ಹೆ. ೧೨ ಕಿ.ಮೀ.

ಈ) ನೆಡುತೋಪುಗಳಲ್ಲಿ ಹಾಗೂ ರಸ್ತೆಯಲ್ಲಿ ನೆಟ್ಟ ಗಿಡಗಳನ್ನು ರಕ್ಷಿಸಲು ಇಲಾಖೆಯಿಂ ಅರಣ್ಯ ರಕ್ಷಕರು ಇದ್ದಾರೆ, ಅಲ್ಲದೆ ಕಾವಲುಗಾರರನ್ನು ನೇಮಿಸಿಕೊಳ್ಳಲಾಗಿದೆ. ನೆಡುತೋಪುಗಳ ಸುತ್ತ ಕಂದಕ ವನ್ನು, ತೋಡಿ ಕಲ್ಲಾರು ಸಸಿಗಳನ್ನು ನೆಡಲಾಗಿದೆ. ಬಳ್ಳಾರಿ ಜಾಲಿ ಬೀಜವನ್ನು ಸಹ ಹಾಕಿದೆ. ಕಂದಕ ಗಳನ್ನು ತೋಡಲು ಆಗದ ಕಡೆ ತಂತಿ ಬೇಲಿ ಅಥವಾ ಕಲ್ಲುಗಳ ಗೋಡೆಯನ್ನು ಕಟ್ಟಲಾಗಿದೆ. ರಸ್ತೆ ಬದಿ ಗಿಡಗಳಿಗೆ ಗಿಡ ರಕ್ಷಕಗಳನ್ನು ಅಳವಡಿಸಲಾಗಿದೆ, ಮಂತ್ತು ಈಚಲ ಮರದ ಟೊಂಗೆಯನ್ನು ಕಟ್ಟಲಾಗಿದೆ.

ಶ್ರೀ ಚಂದ್ರಶೇಖರ ಮಾಮನಿ.—ಆಧ್ಯಕ್ಷರೇ 'ಅ' ಪ್ರಶ್ನೆಯಲ್ಲಿ ೧೯೮೪-೮೫ ಹಾಗೂ ೧೯೮೫-೮೬ನೇ ಸಾಲುಗಳಲ್ಲಿ ಸವದತ್ತಿ ತಾಲ್ಲೂಕಿನಲ್ಲಿ ೭ ಲಕ್ಷ ೩೦ ಸಾವಿರ ಸಸಿಗಳನ್ನು ನೆಡಲಾಗಿದೆ ಎಂದಿದ್ದಾರೆ. ಆದರೆ ಅಲ್ಲಿ ಪ್ರತ್ಯಕ್ಷವಾಗಿ ನೋಡಿದಾಗ ಅಷ್ಟು ಸಂಖ್ಯೆಗಳಲ್ಲಿ ನೆಟ್ಟಿಲ್ಲ. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಇನ್ನು ೧೬,೦೭,೨೯೪ ರೂಗಳಲ್ಲಿ ಅರಣ್ಯೀಕರಣ ಕೆಲಸಗಳನ್ನು ಮಾಡಿದ್ದಾರೆಂದಿದ್ದಾರೆ. ಆದರೆ ನಿಜವಾಗಿಯೂ ಅಲ್ಲಿ ಅಷ್ಟು ಕೆಲಸ ಆಗಿಲ್ಲ ಅಲ್ಲಿ. ಮತ್ತು ಅಲ್ಲಿನವರು ಅಧಿಕಾರ ದುರುಪಯೋಗ ಮಾಡಿ ಅಲ್ಲಿಗೆ ಬಂದ ಆಹಾರ ಧಾನ್ಯಗಳನ್ನು ಯಾರಿಗೆ ಕೊಡಬೇಕೋ ಅವರಿಗೆ ಕೊಡುತ್ತಿದ್ದಾರೆ ಅಲ್ಲಿನ ರೇಂಜ್ ಆಫೀಸ್‌ನಲ್ಲಿದ್ದ ಡೈಲಿ ವೇಜಸ್ ಸಿಬ್ಬಂದಿ ಒಬ್ಬನು ಅಲ್ಲಿಗೆ ಬಂದಿದ್ದು ಪಾಲಿಥಿನ್ ಬ್ಯಾಗ್ಸ್‌ನ್ನು ಹಾಗೂ ಟೈಪರೈಟರುಗಳನ್ನು ಅಕ್ರಮವಾಗಿ ಮಾರಾಟ ಮಾಡಿದ್ದಾನೆ. ಇವೆಲ್ಲವೂ ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜಿ. ಎಸ್. ದೇಶಮುಖ್.—ಇಲಾಖೆಯಿಂದ ಪೂರ್ಣ ವಿಚಾರಿಸಿರುವುದು ನಿಜ. ಕೆಲವು ಕಡೆ ಇನ್ನೂ ಕೆಲಸ ಪಡೆಯುತ್ತಿದೆ. ಇನ್ನು ನೀವು ಹೇಳಿದ ಡೈಲಿ ವೇಜಸ್ ವರ್ಕರ್ಸ್ ಬಗ್ಗೆ ನೀವು ಕಂಪ್ಲೇಂಟ್ ಅನ್ನು ನನಗೆ ಕೊಟ್ಟರೆ ನಾನು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಚಂದ್ರಶೇಖರ ಮಾಮನಿ.—ಉಳಿದಂತಹ ಗಿಡಗಳಿಗೆ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಅದನ್ನು ಸಂರಕ್ಷಣೆ ಮಾಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ. ಎಸ್. ದೇಶಮುಖ್.—ನೀರಿನ ವ್ಯವಸ್ಥೆ ಮಾಡಿದ್ದೇವೆ. ಒಂದು ಗಿಡಕ್ಕೆ ಪ್ರತಿ ವರ್ಷ ೨೧ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಎಲ್ಲಾ ಗಿಡಗಳಿಗೂ ಈ ವರ್ಷದಲ್ಲಿ ನೀರಿನ ವ್ಯವಸ್ಥೆ ಮಾಡುತ್ತೇವೆ.

ಕೊಡಗು ಜಿಲ್ಲೆಯಲ್ಲಿ ಗ್ರಾಮಾಂತರ ವಿದ್ಯುದೀಕರಣದ ಬಗ್ಗೆ

೭೭೦. (ಡಿ) ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ವಾಣಿಜ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕೊಡಗಿನಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ? ಹಾಗೂ ಇನ್ನೂ ಎಷ್ಟು ಗ್ರಾಮಗಳಿಗೆ ಒದಗಿಸಬೇಕಾಗಿದೆ ?

(ಆ) ಈಗಾಗಲೇ ೨೨ ಗ್ರಾಮಗಳಿಗೆ (ಹ್ಯಾಮ್ಲೆಟ್ಸ್) ವಿದ್ಯುಚ್ಛಕ್ತಿ ಒದಗಿಸಬೇಕೆಂದು ವಿದ್ಯುತ್ ಮಂಡಳಿಗೆ ಶಿಫಾರಸ್ಸು ಮಾಡಿದ್ದಾಗ್ಯೂ ಈತನಕ ಮೇಲ್ಕಂಡ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸದಿರಲು ಕಾರಣವೇನು ?

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕಾ ಮಂತ್ರಿ ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ೩೧-೧೨-೮೬ರವರೆಗೆ ೨೮೬ ಗ್ರಾಮಗಳಿಗೆ ಒದಗಿಸಿದೆ. ೫ ಗ್ರಾಮಗಳಿಗೆ ಒದಗಿಸ ಬೇಕಾಗಿದೆ.

(ಆ) ಗ್ರಾಮಾಂತರ ವಿದ್ಯುದೀಕರಣದ ಶೇಕಡಾ ೧೦೦ರ ಗುರಿಯನ್ನು ೧೯೮೮-೮೯ರ ಒಳಗೆ ಸಾಧಿಸುವ ಉದ್ದೇಶವಿದೆ. ಇದಾದ ನಂತರ ಉಪ ಗ್ರಾಮಗಳ ವಿದ್ಯುದೀಕರಣವನ್ನು ತೀವ್ರಗೊಳಿಸ ಲಾಗುತ್ತದೆ.

ಶ್ರೀ ಡಿ. ಎ. ಚಿನ್ನಪ್ಪ.—ಕೊಡಗಿನಲ್ಲಿ ೨೮೬ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದೆ ಎಂದು ಹೇಳುತ್ತಿದ್ದೀರಿ ಆಲ್ಲಿರುವ ಪರಿಸ್ಥಿತಿ ಏನೆಂದರೆ ೧೦-೧೨ ಮನೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿ